ಕರ್ನಾಟಕ ಸರ್ಕಾರ

# ಕರ್ನಾಟಕ ಪರೀಕ್ಷಾ ಪ್ರಾಧಿಕಾರ

ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 012. ದೂ: 080–23460460 (5 ಲೈನ್‌ಗಳು)
23564583 ಫ್ಯಾಕ್ಸ್: 080–23461576 ವೆಬ್‌ಸೈಟ್ : http://kea.kar.nic.in ಇಮೇಲ್: keauthority-ka@nic.in

ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್.55/2014–15 ದಿನಾಂಕ: 16–07–2015

## ತಿದ್ದುಪಡಿ ಅಧಿಸೂಚನೆ

**ಕರ್ನಾಟಕದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇಮಕಾತಿ**

ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 300 ಡಿಸಿಇ 2013 (ಭಾ–3), ಬೆಂಗಳೂರು, ದಿನಾಂಕ 06–11–2014 ರ ಹಾಗೂ "ಕರ್ನಾಟಕ ಶಿಕ್ಷಣ ಇಲಾಖಾ ಸೇವೆಗಳು (ಕಾಲೇಜು ಶಿಕ್ಷಣ ಇಲಾಖೆ) (ನೇಮಕಾತಿ) (ವಿಶೇಷ) ನಿಯಮಗಳು 2014" ರ ಅನ್ವಯ ಮತ್ತು ಸರ್ಕಾರದ ಆದೇಶ ಸಂಖ್ಯೆ ಇಡಿ 254 ಡಿಸಿಇ 2013 ದಿನಾಂಕ 26–02–2015 ರ ಅನ್ವಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ 2160 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಭರ್ತಿ ಮಾಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವ ಸಂಬಂಧ ದಿನಾಂಕ 22–01–2015 ಮತ್ತು 03–03–2015 ರಂದು ಇದೇ ಸಮಸಂಖ್ಯೆಯ ಅಧಿಸೂಚನೆಯನ್ನು ಹೊರಡಿಸಲಾಗಿತ್ತು.

ನಂತರ ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆಯ ಪತ್ರ ಸಂಖ್ಯೆ ಕಾಶಿಇ: 242: ಉನೇಬ: 2014–15: ನೇವಿ 1, ಬೆಂಗಳೂರು, ದಿನಾಂಕ 23–03–2015 ರ ಅನ್ವಯ ಪರೀಕ್ಷಾ ಕಾರ್ಯಗಳನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿತ್ತು.

ಮುಂದುವರಿದು, ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆಯ ಪತ್ರ ಸಂಖ್ಯೆ ಕಾಶಿಇ: 242: ಉನೇಬ: 2014–15: ನೇವಿ 1, (ಭಾಗ–2) ಬೆಂಗಳೂರು, ದಿನಾಂಕ 22–05–2015 ರಲ್ಲಿ, ವಿವಿಧ ವಿಷಯಗಳಲ್ಲಿನ ಸ್ಥಳೀಯ ವೃಂದ ಮತ್ತು ಮಾತೃ ವೃಂದದ ಹುದ್ದೆಗಳ ಮೀಸಲಾತಿ ಬಿಂದುಗಳ ಹಂಚಿಕೆಯನ್ನು ನಿಯಮಾನುಸಾರ ವಿಂಗಡಿಸಿ, ಪುನರ್ ವಿಂಗಡಣೆ ಮಾಡಿರುವುದಾಗಿ ತಿಳಿಸಿರುತ್ತಾರೆ. ಸದರಿ ಮಾರ್ಪಡಿಸಿದ ವಿವಿಧ ವಿಷಯಗಳ 2160 ಹುದ್ದೆಗಳ ಹಂಚಿಕೆಯ ವಿವರಗಳನ್ನು ಪ್ರಾಧಿಕಾರವು ವೆಬ್‌ಸೈಟ್ **http://kea.kar.nic.in** ನಲ್ಲಿ ಪ್ರಕಟಿಸಿದೆ ಹಾಗೂ ಅಭ್ಯರ್ಥಿಗಳು ಮತ್ತು ಸಂಬಂಧಿಸಿದವರು ಇದನ್ನು ಗಮನಿಸಬಹುದಾಗಿದೆ ಹಾಗು ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆಯ ಪತ್ರ ಸಂಖ್ಯೆ ಕಾಶಿಇ: 242: ಉನೇಬ: 2014–15: ನೇವಿ 1, (ಭಾಗ–2) ಬೆಂಗಳೂರು, ದಿನಾಂಕ 30–06–2015 ರ ಅನ್ವಯ ಆಯ್ಕೆ ಪ್ರಕ್ರಿಯೆಯನ್ನು ಸ್ಪರ್ಧಾತ್ಮಕ ಪರೀಕ್ಷೆ ಮುಖಾಂತರ ಪ್ರಾರಂಭಿಸಲು ಕೋರಿರುತ್ತಾರೆ.

ಸದರಿ ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ದಿನಾಂಕ 22–01–2015 ಮತ್ತು 03–03–2015 ರ ಇದೇ ಸಮಸಂಖ್ಯೆಯ ಅಧಿಸೂಚನೆಯಲ್ಲಿ ನಿಗದಿ ಪಡಿಸಿರುವ ಎಲ್ಲಾ ಅರ್ಹತೆ, ಸೂಚನೆ ಮತ್ತು ಮಾರ್ಗಸೂಚಿಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಎಂಬುದನ್ನು ಅಭ್ಯರ್ಥಿಗಳು ದಯವಿಟ್ಟು ಗಮನಿಸಬಹುದಾಗಿದೆ. ಆದ್ದರಿಂದ ಆಸಕ್ತಿಯುಳ್ಳ ಅರ್ಹ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಮಾತ್ರ ದಿನಾಂಕ 22–07–2015 ರಿಂದ 05–08–2015 ರೊಳಗಾಗಿ ಅರ್ಜಿಯನ್ನು ಸಲ್ಲಿಸಬೇಕು ಹಾಗು ನಿಗದಿತ ಶುಲ್ಕವನ್ನು ದಿನಾಂಕ 06–08–2015 ರೊಳಗಾಗಿ ಪಾವತಿಸಬೇಕು. **ಈಗಾಗಲೇ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ನಿಗದಿತ ಶುಲ್ಕವನ್ನು ಪಾವತಿಸಿರುವ ಅಭ್ಯರ್ಥಿಗಳು ಮತ್ತೊಮ್ಮೆ ಅರ್ಜಿಯನ್ನು ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ.**

ವಯೋಮಿತಿ ಮತ್ತು ಶೈಕ್ಷಣಿಕ ವಿದ್ಯಾರ್ಹತೆಗಳು ಮತ್ತು ಇತ್ಯಾದಿ ಮಾನದಂಡಗಳು, ಈ ಮೊದಲು ಹೊರಡಿಸಿದ ಅಧಿಸೂಚನೆ ಅನ್ವಯ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ ದಿನಾಂಕ 22–01–2015 ಮತ್ತು 03–03–2015 ರ ಅಧಿಸೂಚನೆ ಪ್ರಕಾರ ನಿರ್ಧರಿಸಲಾಗುವುದು ಹಾಗೂ ಈ ಅಧಿಸೂಚನೆ ಪ್ರಕಾರ ಅರ್ಜಿಸಲ್ಲಿಸುವ ಅಭ್ಯರ್ಥಿಗಳಿಗೆ ದಿನಾಂಕ 16–07–2015ರ ಅಧಿಸೂಚನೆ ಪ್ರಕಾರ ನಿರ್ಧರಿಸಲಾಗುತ್ತದೆ.

ಸ್ಪರ್ಧಾತ್ಮಕ ಪರೀಕ್ಷೆಯ ವೇಳಾಪಟ್ಟಿಯನ್ನು ಸದ್ಯದಲ್ಲಿಯೇ ಪ್ರಕಟಿಸಲಾಗುವುದು. ಆಫ್‌ಲೈನ್ ಅರ್ಜಿಗಳನ್ನು / ಪೆನ್ ಮತ್ತು ಪೇಪರ್ ಉಪಯೋಗಿಸಿ ಸಲ್ಲಿಸುವ ಅರ್ಜಿಪ್ರತಿಗಳನ್ನು ಸ್ವೀಕರಿಸಲಾಗುವುದಿಲ್ಲ.

ಸಹಿ/– **ಸುಷಮಾ ಗೋಡಬೋಲೆ,** ಭಾಆಸೇ, ಕಾರ್ಯನಿರ್ವಾಹಕ ನಿರ್ದೇಶಕರು